Karnatak Law Society's
**Vishwanathrao Deshpande Institute of Technology**
**(Approved by AICTE, New Delhi. Affiliated to VTU, Belagavi)**
**(Recognised Under Section 2(f) by UGC, New Delhi)**
**Udyog Vidya Nagar, Haliyal – 581329, Dist: Uttar Kannada (Karnataka)**
**Phone: 08284-220861, 220334, 221409, Fax: 08284-220813**
**www.klsvdit.edu.in** **principal@klsvdit.edu.in**

Date: 29-04-2022

**ಪತ್ರಿಕಾ ಪ್ರಕಟಣೆ:**

## ಪೇಟೆಂಟ್ ನೋಂದಣಿ ಕುರಿತ ವೆಬಿನಾರ್ ಯಶಸ್ವಿ

ಕೆ.ಎಲ್.ಎಸ್ ವಿ.ಡಿ.ಐ.ಟಿ ಹಳಿಯಾಳದಲ್ಲಿ ರಾಷ್ಟ್ರೀಯ ಬೌದ್ಧಿಕ ಆಸ್ತಿ ಹಕ್ಕುಗಳ ಜಾಗೃತಿ ಅಭಿಯಾನದ ಕುರಿತು ಎಪ್ರೀಲ್ 29 ರಂದು ಆನ್ ಲೈನ್ ಮಾಹಿತಿ ಕಾರ್ಯಕ್ರಮ ಆಯೋಜಿಸಲಾಗಿತ್ತು. ವಿಶ್ವ ಬೌದ್ಧಿಕ ಆಸ್ತಿ ಹಕ್ಕುಗಳ ಜಾಗೃತಿ ದಿನದ ಪ್ರಯುಕ್ತ ಅಖಿಲ ಭಾರತ ತಾಂತ್ರಿಕ ಶಿಕ್ಷಣ ಮಂಡಳಿ, ಕೇಂದ್ರ ಶಿಕ್ಷಣ ಸಚಿವಾಲಯ ಮತ್ತು ಆಂತರಿಕ ವ್ಯವಹಾರಗಳ ಸಚಿವಾಲಯ ಹಮ್ಮಿಕೊಂಡಿರುವ ಸಪ್ತಾಹದಡಿಯಲ್ಲಿ ಈ ವೆಬಿನಾರ್ ಹಮ್ಮಿಕೊಳ್ಳಲಾಗಿತ್ತು.

ಮಧ್ಯಾಹ್ನ 2 ಗಂಟೆಗೆ ಪ್ರಾರಂಭವಾದ ಈ ಕಾರ್ಯಕ್ರಮದಲ್ಲಿ ರಾಷ್ಟ್ರೀಯ ಪೇಟೆಂಟ್ ಕಛೇರಿಯ ಪರೀಕ್ಷಕರಾದ ಶ್ರೀ. ಮನುಜ್ ಗಂಗ್ವಾರ್ ಸಂಪನ್ಮೂಲ ವ್ಯಕ್ತಿಗಳಾಗಿ ಭಾಗವಹಿಸಿ ಬೌದ್ಧಿಕ ಆಸ್ತಿ ಹಕ್ಕುಗಳು, ವ್ಯಾಪಾರ ರಹಸ್ಯ, ಟ್ರೇಡ್ ಮಾರ್ಕ್, ಪೇಟೆಂಟ್ ಪ್ರಕಟಣೆ ಮತ್ತು ನೋಂದಣಿ ಕುರಿತು ಮಾಹಿತಿ ನೀಡಿದರು. ಭಾರತದಲ್ಲಿ ಗಣನೀಯ ಸಂಖ್ಯೆಯಲ್ಲಿ ಸಂಶೋಧನೆಗಳಾಗುತ್ತಿದ್ದರೂ ಸಹ ಸಂಶೋಧಕರಿಗೆ ಪೇಟೆಂಟ್ ಅರಿವು ಇರದ ಕಾರಣ ಸಂಶೋಧನೆ ನೋಂದಣಿಯಾಗದೆ ಉಳಿಯುತ್ತಿದೆ. ಈ ಕುರಿತು ಸಂಶೋಧಕರು ಪೇಟೆಂಟ್ ಮಾಹಿತಿ ಹೊಂದಿರುವುದು ಅಗತ್ಯ ಎಂದು ನುಡಿದರು.

ಈ ಕಾರ್ಯಕ್ರಮದ ಸಂಚಾಲಕರು (ಕಲಾಂ ಬೌದ್ಧಿಕ ಆಸ್ತಿ ಹಕ್ಕುಗಳ ಜಾಗೃತಿ ಅಭಿಯಾನ) ಮತ್ತು ಮಹಾವಿದ್ಯಾಲಯದ ಸಂಶೋಧನಾ ವಿಭಾಗ ಮುಖ್ಯಸ್ಥರಾದ ಡಾ. ಮಹೆಂದ್ರ ಎಮ್ ದೀಕ್ಷಿತ್ ಸ್ವಾಗತಿಸಿದರು. ಪ್ರೊ. ಎಸ್. ಡಿ. ಕುಲಕರ್ಣಿ ವಂದಿಸಿದರು. ಗೂಗಲ್ ಮೀಟ್ ಮುಖಾಂತರ ನಡೆದ ಈ ಕಾರ್ಯಕ್ರಮದಲ್ಲಿ 200 ಕ್ಕೂ ಹೆಚ್ಚು ವಿದ್ಯಾರ್ಥಿಗಳು ಮತ್ತು 100 ಕ್ಕೂ ಹೆಚ್ಚು ಉಪನ್ಯಾಸಕರು ಭಾಗವಹಿಸಿದ್ದರು ಎಂದು ಪ್ರಾಂಶುಪಾಲರಾದ ಡಾ. ವಿ. ಎ. ಕುಲಕರ್ಣಿ ತಮ್ಮ ಪ್ರಕಟಣೆಯಲಿ ತಿಳಿಸಿದಾರೆ.

ಪ್ರಾಂಶುಪಾಲರು

Principal
KLS Vishwanathrao Deshpande
Institute of Technology, Haliyal



ಶ್ರೀ. ಮನುಜ್ ಗಂಗ್ವಾರ್